ಈ ಲೇಖನದ ವಿಷಯಾನುಕ್ರಮಣಿಕೆ

# ಈ ಬಾರಿಯ ಕರ್ಕಸಂಕ್ರಮಣದ ಆಚರಣೆ


## 17-7-2022 ಭಾನುವಾರ ಕರ್ಕಸಂಕ್ರಮಣ 2

ಪ್ರಾತಃಸ್ನಾನ, ಸಂಧ್ಯಾವಂದನೆ, ನಿರ್ಮಾಲ್ಯ 3

ಸೂರ್ಯೋದಯಕಾಲಕ್ಕೆ ಸಂಕ್ರಾಂತಿ ನಿಮಿತ್ತ ಸ್ನಾನ 3

ಪೂಜೆ, ಜಪ, ಪಾರಾಯಣ 4

ನಮಸ್ಕಾರ ಸಂಕೀರ್ತನೆ 5

ಹಸ್ತೋದಕ ಇರುವದಿಲ್ಲ 5

ಯಥಾಶಕ್ತಿ ದಾನ 6

ಸಂಕ್ರಾಂತಿ ಶ್ರಾದ್ಧ ಮತ್ತು ಸಾಂವತ್ಸರಿಕ ಶ್ರಾದ್ಧಗಳು 7

ಸಂಕ್ರಾಂತಿಶ್ರಾದ್ಧ 8

ಸಂಕ್ರಾಂತಿತರ್ಪಣ 9

ಅಡಿಗೆ, ಭೋಜನದ ಸಮಯ 10

ಜೀವತ್ಪಿತೃಕರ ಮತ್ತು ಸ್ತ್ರೀಯರ ಆಚರಣೆಯ ಕ್ರಮ 10

ಶೂದ್ರರು ಆಚರಿಸುವ ಕ್ರಮ 12

## ಅರ್ಥಸಹಿತ ಸಂಕಲ್ಪಗಳು 14

ನಿಷ್ಕಾಮ ಸಂಕಲ್ಪ 16

ಸಕಾಮ ಸಂಕಲ್ಪ 22

ಸಮರ್ಪಣೆ 29

## ಈ ಬಾರಿಯ ಕರ್ಕಸಂಕ್ರಮಣದ ಆಚರಣೆ

### 17-7-2022 ಭಾನುವಾರ ಕರ್ಕಸಂಕ್ರಮಣ

ಶ್ರೀ ಶುಭಕೃತ್ ಸಂವತ್ಸರದಲ್ಲಿ ಆಷಾಢ ಕೃಷ್ಣ ಚತುರ್ಥಿ ಭಾನುವಾರ [17-07-2022] ಬೆಳಿಗ್ಗೆ 10:40 ರ ಸುಮಾರಿಗೆ ರವಿಗ್ರಹ ಕರ್ಕರಾಶಿಯನ್ನು ಪ್ರವೇಶ ಮಾಡುತ್ತದೆ.ಇದೇ ಕರ್ಕಸಂಕ್ರಮಣ.

ಕರ್ಕಸಂಕ್ರಮಣದಲ್ಲಿ ಕರ್ಕರಾಶಿಗೆ ಪ್ರವೇಶವಾಗುವ ಹಿಂದಿನ 20 ಗಳಿಗೆಗಳು ಪುಣ್ಯಕಾಲ. 20 ಗಳಿಗೆಗಳಲ್ಲಿ ಸೂರ್ಯೋದಯದ ಹಿಂದಿನ ಸಮಯ ಸೇರಿದ್ದರೆ ಸೂರ್ಯೋದಯದಿಂದ ಪುಣ್ಯಕಾಲ ಆರಂಭ.

ಹೀಗಾಗಿ ಸೂರ್ಯೋದಯವಾದ ಬಳಿಕ ಬೆಳಿಗ್ಗೆ 10:40 ರ ಒಳಗೆ ಕರ್ಕಸಂಕ್ರಾಂತಿನಿಮಿತ್ತವಾದ ಎಲ್ಲ ಕಾರ್ಯಗಳನ್ನೂ ಮುಗಿಸತಕ್ಕದ್ದು.

## ಪ್ರಾತಃಸ್ನಾನ, ಸಂಧ್ಯಾವಂದನೆ, ನಿರ್ಮಾಲ್ಯ

ಸೂರ್ಯೋದಯಕ್ಕಿಂತ ಒಂದೂವರೆ ಗಂಟೆ ಮುಂಚೆ ಬ್ರಾಹ್ಮಮುಹೂರ್ತದಲ್ಲಿಯೇ ಎದ್ದು ಸೂರ್ಯೋದಯದ ಒಳಗೆ ಸ್ನಾನ ಸಂಧ್ಯಾವಂದನೆ ಮತ್ತು ದೇವರ ನಿರ್ಮಾಲ್ಯವಿಸರ್ಜನೆಯನ್ನು ಮುಗಿಸಿರಬೇಕು.

## ಸೂರ್ಯೋದಯಕಾಲಕ್ಕೆ ಸಂಕ್ರಾಂತಿ ನಿಮಿತ್ತ ಸ್ನಾನ

**ಆ ನಂತರ ಸಂಕ್ರಾಂತಿಯ ನಿಮಿತ್ತವಾಗಿ ಅತ್ತ ಸೂರ್ಯೋದಯವಾಗುವ ಸಮಯಕ್ಕೆ ಸರಿಯಾಗಿ ಎಳ್ಳಿನ ಪುಡಿಯನ್ನು ಹಚ್ಚಿಕೊಂಡು ಸ್ನಾನ ಮಾಡಬೇಕು. ಸರೋವರ, ನದೀ, ಸಮುದ್ರಗಳಲ್ಲಿ ಸ್ನಾನ ಸರ್ವಶ್ರೇಷ್ಠ.**

ಸಂಕ್ರಮಣ ಕಾಲದಲ್ಲಿ ಸ್ನಾನ ಮಾಡುವದರಿಂದ ಖಾಯಿಲೆಗಳು ಪರಿಹಾರವಾಗುತ್ತವೆ ಮತ್ತು ದಾರಿದ್ರ್ಯ ನೀಗಿ ಸಾತ್ವಿಕ ಸಂಪತ್ತು ದೊರೆಯುತ್ತದೆ. ಸ್ನಾನ ಮಾಡದಿದ್ದಲ್ಲಿ ಖಾಯಿಲೆಗಳು ಮತ್ತು ದಾರಿದ್ರ್ಯ ಉಂಟಾಗುತ್ತದೆ ಎಂದು ಶಾಸ್ತ್ರ ತಿಳಿಸುತ್ತದೆ —

## ರವಿಸಂಕ್ರಮಣೇ ಪುಣ್ಯೇ
## ನ ಸ್ನಾಯಾದ್ ಯದಿ ಮಾನವಃ
## ಸಪ್ತಜನ್ಮಸು ರೋಗೀ ಸ್ಯಾದ್
## ದುಃಖಭಾಗೀ ಚ ಜಾಯತೇ

ಸರೋವರ, ನದಿ, ಸಮುದ್ರಗಳಲ್ಲಿ ಸ್ನಾನ ಶ್ರೇಷ್ಠ. ಮನೆಯಲ್ಲಿ ಮಾಡುವಾಗ ಸಕಲ ತೀರ್ಥಾಭಿಮಾನಿ ದೇವತೆಗಳನ್ನು ನೆನೆದು ಮಾಡತಕ್ಕದ್ದು.

## ಪೂಜೆ, ಜಪ, ಪಾರಾಯಣ

ಸಂಕ್ರಾಂತಿ ಮಹತ್ತಮ ಪರ್ವಪುಣ್ಯಕಾಲ. ಆಗ ಮಾಡುವ ಎಲ್ಲ ಜಪ ಪಾರಾಯಣಗಳೂ ಕೋಟಿ ಪಟ್ಟು ಮಿಗಿಲಾದ ಪುಣ್ಯವನ್ನು ನೀಡುತ್ತವೆ.

ದೇವರ ಸ್ತೋತ್ರಗಳ ಸೂರ್ಯಸ್ತೋತ್ರಗಳ ಪಾರಾಯಣವನ್ನು ಮಾಡತಕ್ಕದ್ದು. ಮಂತ್ರಗಳ ಉಪದೇಶವಾಗಿದ್ದರೆ ಜಪವನ್ನು ಮಾಡತಕ್ಕದ್ದು. ರಾಯರ ಸ್ತೋತ್ರದ ಪಾರಾಯಣ ತಪ್ಪಿಸಬೇಡಿ.

ಮಹಾಪ್ರಯತ್ನ ಪಟ್ಟು ಸಾಲಿಗ್ರಾಮ ಪೂಜೆ ಅರ್ಚನೆಯನ್ನು ಮಾಡುವದು ಮಹಾಪುಣ್ಯಪ್ರದ.

ಶ್ರೀವಿಷ್ಣುಸಹಸ್ರನಾಮವನ್ನು ಪಠಿಸುತ್ತ ತುಳಸಿಯ ಅರ್ಚನೆಯನ್ನು ತಪ್ಪದೇ ಮಾಡತಕ್ಕದ್ದು.

## ನಮಸ್ಕಾರ ಸಂಕೀರ್ತನೆ

ಕಲಿಯುಗದಲ್ಲಿ ಸಂಕೀರ್ತನಕ್ಕಿಂತ ಮಿಗಿಲಾದ ಪುಣ್ಯಕರ್ಮವಿಲ್ಲ.

**"ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ"** "ನಾರದರೇ, ನನ್ನ ಭಕ್ತರು ಎಲ್ಲಿ ಹಾಡುತ್ತಾರೆಯೋ ಅಲ್ಲಿರುತ್ತೇನೆ  ನಾನು" ಎಂದು ನಮ್ಮ ಸ್ವಾಮಿಯ ವಚನವಿದೆ.  ಭಕ್ತಿಯಿಂದ ದೇವರ ನಾಮಗಳನ್ನು ಹೇಳುತ್ತ,  ಮೈಮನ ದಣಿಯುವಷ್ಟು ದೇವರಿಗೆ ನಮಸ್ಕಾರ ಸಮರ್ಪಿಸುವದು ಎಲ್ಲ ಕಾಲದಲ್ಲಿಯೂ ಮಾಡಬಹುದಾದ ಸರ್ವಶ್ರೇಷ್ಠ ಸಾಧನೆಗಳು.

## ಹಸ್ತೋದಕ ಇರುವದಿಲ್ಲ

ಸಂಕ್ರಾಂತಿಯ ದಿವಸ ಯತಿಗಳಿಗೆ ಹಸ್ತೋದಕ ಸಮರ್ಪಿಸಬಾರದು. ಯತಿಗಳಿಗೆ ಸಂಕ್ರಾಂತಿಯ ಉಪವಾಸ ಶ್ರೇಷ್ಠವಾದದ್ದು ಎಂದು ಶ್ರೀ ಮಧ್ವಾನುಜಾಚಾರ್ಯರು ತಿಳಿಸಿದ್ದಾರೆ.

## ಯಥಾಶಕ್ತಿ ದಾನ

ಕರ್ಕ ಸಂಕ್ರಮಣ ಮತ್ತು  ಮಕರ ಸಂಕ್ರಮಣಗಳಲ್ಲಿ ಮಾಡುವ ದಾನ ಕೋಟಿಪಟ್ಟು ಫಲ ನೀಡುತ್ತದೆ.   ಅಂದರೆ ಒಂದು ರೂಪಾಯಿ ದಾನ ಮಾಡಿದರೆ ಸ್ವಾಮಿ ಕೋಟಿ ರೂಪಾಯಿಯ ಫಲವನ್ನು ಅನುಗ್ರಹಿಸುತ್ತಾನೆ.  **"ಅಯನೇ ಕೋಟಿಗುಣಿತಂ ಸಹಸ್ರಂ ವಿಷುವೇ ಫಲಮ್"**

**ದಾನವನ್ನು ಎಂದಿಗೂ ಶಕ್ತಿ ಮೀರಿ ಮಾಡತಕ್ಕದ್ದಲ್ಲ.  ಸಾಲ ಮಾಡಿ ಸರ್ವಥಾ ದಾನ ಮಾಡಬಾರದು.**

ನಮ್ಮ ಬಳಿಯೇ ಸಂಪತ್ತು ಕಡಿಮೆ ಇದ್ದಾಗ ಎಷ್ಟನ್ನು ದಾನ ನೀಡಿದ ಬಳಿಕ ಮನಸ್ಸಿಗೆ ಪರಿತಾಪ ಉಂಟಾಗುವದಿಲ್ಲವೋ ಅಷ್ಟನ್ನು ಮಾತ್ರ ದಾನ ನೀಡಬೇಕು.  ದೇವರು ಸಮೃದ್ಧವಾಗಿ ಸಂಪತ್ತು ನೀಡಿದ್ದಲ್ಲಿ ನಮಗೆ ನಾವು ವಂಚನೆ ಮಾಡಿಕೊಳ್ಳದೆ, ಮನಸ್ಸಿಗೆ ತೃಪ್ತಿಯಾಗುವಷ್ಟು ದಾನವನ್ನು ನೀಡತಕ್ಕದ್ದು.

## ಸಂಕ್ರಾಂತಿ ಶ್ರಾದ್ಧ ಮತ್ತು ಸಾಂವತ್ಸರಿಕ ಶ್ರಾದ್ಧಗಳು

ಸಂಕ್ರಾಂತಿ ನಿಮಿತ್ತವಾಗಿ ಶ್ರಾದ್ಧ ಮಾಡುವವರು ಸೂರ್ಯೋದಯವಾದ ಎರಡು ಗಂಟೆಯ ಒಳಗೆ ಶ್ರಾದ್ಧ ಮುಗಿಸಬೇಕು.

ಆಷಾಢ ಮಾಸದ ಕೃಷ್ಣಪಕ್ಷದ ಚತುರ್ಥಿಯಂದು ಮೃತರಾದವರ ಶ್ರಾದ್ಧವನ್ನು ಅಥವಾ ಚತುರ್ಥೀತಿಥಿಯ ಮಾಸಿಕಶ್ರಾದ್ಧಗಳನ್ನು ಭಾನುವಾರ ಕುತಪಕಾಲದಲ್ಲಿ, (11 ಗಂಟೆಯ ನಂತರ)  ಮಾಡತಕ್ಕದ್ದು. ಕಾರಣ, ಸಾಂವತ್ಸರಿಕ ಶ್ರಾದ್ಧಕ್ಕೆ ಕುತಪಕಾಲ ಅತ್ಯಂತ ಶ್ರೇಷ್ಠ.

**ಬೆಳಿಗ್ಗೆ ಕರ್ಕಸಂಕ್ರಮಣದ ಪುಣ್ಯ ಕಾಲ ಎಂದು ಬೆಳಿಗ್ಗೆಯೇ ಸಾಂವತ್ಸರಿಕ ಶ್ರಾದ್ಧ ಮಾಡಿಬಿಡಬಾರದು. ಆ ಕಾಲದಲ್ಲಿ ಸರ್ವಪಿತೃಗಳಿಗೆ ಸಂಕ್ರಾತಿ ನಿಮಿತ್ತವಾಗಿ ತರ್ಪಣವನ್ನು ನೀಡಬೇಕು.**

ಭಾನುವಾರ ಸಾಂವತ್ಸರಿಕ ಶ್ರಾದ್ಧ ಮಾಡುವವರು ಶ್ರಾದ್ಧದ ತರ್ಪಣವನ್ನು ಭಾನುವಾರ ನೀಡದೇ ಸೋಮವಾರ ನೀಡಬೇಕು.

ವಸ್ತುಸ್ಥಿತಿಯಲ್ಲಿ ಪ್ರತೀ ಶ್ರಾದ್ಧದಲ್ಲಿಯೂ ತರ್ಪಣವನ್ನು ಮಾರನೆಯ ದಿವಸವೇ ಮಾಡತಕ್ಕದ್ದು. ಈಗಿನ ಕಾಲದಲ್ಲಿ ಆ ದಿವಸವೇ ಮಾಡಿಸುತ್ತಾರೆ. ಆದರೆ, ಈ ಸಂಕ್ರಾಂತಿಯಂದು ಹಾಗೆ ಮಾಡಬಾರದು. ಕಾರಣ, ಒಂದೇ ದಿವಸ ಯಾವುದೇ ಕಾರಣಕ್ಕೂ ಎರಡು ತರ್ಪಣ ನೀಡತಕ್ಕದ್ದಲ್ಲ.

ಹೀಗಾಗಿ ಸಾಂವತ್ಸರಿಕ ಶ್ರಾದ್ಧ ಇರುವವರು ಭಾನುವಾರ ಬೆಳಿಗ್ಗೆ ಸೂರ್ಯೋದಯವಾಗಿ 10:40 ರ ಒಳಗೆ ಸರ್ವಪಿತೃಗಳಿಗೆ ತರ್ಪಣ ನೀಡಿ ಆ ನಂತರ ಕುತಪಕಾಲದಲ್ಲಿ ಸಾಂವತ್ಸರಿಕ ಶ್ರಾದ್ಧ ಮಾಡಬೇಕು.

## ಸಂಕ್ರಾಂತಿಶ್ರಾದ್ಧ

ಸಂಕ್ರಾಂತಿ ನಿಮಿತ್ತ ಶ್ರಾದ್ಧ ಮಾಡುವವರು ಸೂರ್ಯೋದಯವಾಗಿ 10:40 ರ ಒಳಗೆ ಒಳಗೆ ಶ್ರಾದ್ಧ ತರ್ಪಣ ಎರಡನ್ನೂ ಪೂರ್ಣ ಮುಗಿಸಬೇಕು.

## ಸಂಕ್ರಾಂತಿತರ್ಪಣ

**ತಂದೆ ಇಲ್ಲದ ದ್ವಿಜ ಪುರುಷರು ಸಂಕ್ರಾಂತಿಯ ದಿವಸದಂದು ಸರ್ವಪಿತೃಗಳಿಗೂ ತಿಲತರ್ಪಣವನ್ನು ನೀಡಲೇಬೇಕು.**

ಸಂಕ್ರಾಂತಿಸಮಯದಲ್ಲಿ ಸಮುದ್ರ ನದಿ ಸರೋವರಾದಿಗಳಲ್ಲಿ ಸ್ನಾನ ಮಾಡಿ, ಆ ನಂತರ ದೇವರ ಪೂಜೆಯನ್ನು ಮುಗಿಸಿ ದೇವರ ನಿರ್ಮಾಲ್ಯತೀರ್ಥದಿಂದ ಅಥವಾ ನದೀ ಸರೋವರಗಳ ಪವಿತ್ರಜಲದಿಂದ ತರ್ಪಣವನ್ನು ನೀಡಬೇಕು.

ಕರ್ಕಸಂಕ್ರಮಣ ಎಂದರೆ ಪಿತೃಗಳ ಕಾಲದ ಆರಂಭದ ಸಮಯದ. ಈ ಸಂದರ್ಭದಲ್ಲಿ ನೀಡುವ ತರ್ಪಣ ಅವರಿಗೆ ಮಹತ್ತರ ತೃಪ್ತಿಯನ್ನು ನೀಡುತ್ತದೆ.

**ತಿಲತರ್ಪಣ ನೀಡಿದವರು, ಶ್ರಾದ್ಧ ಮಾಡಿದವರು ಭಾನುವಾರ ರಾತ್ರಿ ಊಟ ಮಾಡಬಾರದು. ಫಲಾಹಾರ ಮಾಡಬಹುದು.**

## ಅಡಿಗೆ, ಭೋಜನದ ಸಮಯ

ಸಂಕ್ರಮಣದ ಕಾಲ ಗ್ರಹಣದಂತೆ ಅಲ್ಲ. ಹೀಗಾಗಿ ಅವಶ್ಯವಾಗಿ ಸಂಕ್ರಮಣದ ಹಿಂದು ಮುಂದಿನ ಕಾಲ (ಅಡಿಗೆ ಭೋಜನಕ್ಕೆ ಯೋಗ್ಯವಾಗಿದ್ದಲ್ಲಿ) ಅವಶ್ಯವಾಗಿ ಮಾಡಬೇಕಾದ ಸತ್ಕರ್ಮಗಳನ್ನು ಮುಗಿಸಿ ಭೋಜನ ಮಾಡತಕ್ಕದ್ದು.

ಹೊರತಾಗಿ ಇಡಿಯ ಸಂಕ್ರಮಣ ಕಾಲ ಮುಗಿದ ಬಳಿಕವೇ ಅಡಿಗೆ ಮಾಡಬೇಕು, ಆ ನಂತರವೇ ಊಟ ಮಾಡಬೇಕು ಎಂಬ ನಿಯಮ ಸರ್ವಥಾ ಇಲ್ಲ.

ಬೆಳಿಗ್ಗೆಯೇ ಊಟ ಮುಗಿಸಿ ಹೊರಡುವ ಅನಿವಾರ್ಯತೆಯಿದ್ದರೆ ಅವಶ್ಯವಾಗಿ ಭೋಜನ ಮಾಡಬಹುದು. ಇಲ್ಲದಿದ್ದಲ್ಲಿ ಮಧ್ಯಾಹ್ನ ಭೋಜನ ಮಾಡತಕ್ಕದ್ದು.

## ಜೀವತ್ಪಿತೃಕರ ಮತ್ತು ಸ್ತ್ರೀಯರ ಆಚರಣೆಯ ಕ್ರಮ

ತರ್ಪಣ ನೀಡಬೇಕಾದವರು ಮಾತ್ರ ತರ್ಪಣ ನೀಡುವವರೆಗೆ ಉಪವಾಸ ಇರಲೇಬೇಕಾಗುತ್ತದೆ. ತಿಂದು, ಕುಡಿದು ತರ್ಪಣ ನೀಡುವಂತಿಲ್ಲ.

ಆದರೆ ತಂದೆ ಇರುವವರು, ಸ್ತ್ರೀಯರು, ಮಕ್ಕಳು ತರ್ಪಣ ನೀಡಬೇಕಾಗಿಲ್ಲ.

ಅವರೂ ಸಹ ಸೂರ್ಯೋದಯದ ಸಮಯಕ್ಕೆ ಎಳ್ಳನ್ನು ಹಚ್ಚಿಕೊಂಡು ಸ್ನಾನ ಮಾಡತಕ್ಕದ್ದು.

ಸ್ತ್ರೀಯರು ನದಿ ಮುಂತಾದವುಗಳಲ್ಲಿ ಸ್ನಾನ ಮಾಡುತ್ತಿದ್ದರೆ ತಲೆ ಸ್ನಾನ ಮಾಡಬಹುದು. ಮನೆಯಲ್ಲಿಯೇ ಮಾಡುತ್ತಿದ್ದರೆ ತಲೆಸ್ನಾನದ ಆವಶ್ಯಕತೆಯಿಲ್ಲ. ಮಾಡಿದರೆ ತಪ್ಪಿಲ್ಲ. ಯಾವ ಸ್ನಾನದಲ್ಲಾದರೂ ಸರಿ ಎಳ್ಳಿನ ಪುಡಿಯನ್ನು ಮೈಗೆ ಹಚ್ಚಿಕೊಂಡು ಸ್ನಾನ ಮಾಡಬೇಕು.

ಶ್ರೀ ವಿಷ್ಣುಸಹಸ್ರನಾಮ, ಗೀತ್ತಾದಿಗಳ ಪಾರಾಯಣವನ್ನು ಮಾಡಿ ಮೈಮನಸ್ಸು ದಣಿಯುವಷ್ಟು ದೇವರಿಗೆ ನಮಸ್ಕಾರಗಳನ್ನು ಸಮರ್ಪಿಸಬೇಕು.

ಆ ನಂತರ ಶ್ರೀವಿಜಯದಾಸರ ಪೈತೃಕಸುಳಾದಿಯ ಮತ್ತು ಶ್ರೀ ಜಗನ್ನಾಥದಾಸಾರ್ಯರ ಪಿತೃಗಣಸಂಧಿಯ ಪಠಣ ಮಾಡಬೇಕು.

## ಶೂದ್ರರು ಆಚರಿಸುವ ಕ್ರಮ

ನಿಯಮಗಳು ಅತ್ಯಧಿಕವಾಗಿರುವದು, ಪ್ರತಿಯೊಂದನ್ನೂ ಮಂತ್ರಪುರಸ್ಸರವಾಗಿ ಮಾಡಬೇಕಾಗಿರುವದು ಬ್ರಾಹ್ಮಣರಿಗಿರುವ ನಿಯಮ. ಆದರೆ ಶೂದ್ರರಿಗೆ ನಿಯಮಗಳು ತುಂಬ ಕಡಿಮೆ.

**ಕರ್ಕ ಸಂಕ್ರಮಣದ ಕಾಲದಲ್ಲಿ ಸ್ನಾನ, ಆ ನಂತರ ಶ್ರೀರಾಮ, ಶ್ರೀರಾಮ ಎಂಬ ತಾರಕಬ್ರಹ್ಮಮಂತ್ರದ ಜಪ. ಆ ನಂತರ ಮೃತರಾದ ಹಿರಿಯರ ಉದ್ಧಾರಕ್ಕಾಗಿ ಸದಾಚಾರಿಗಳಾದ ಬ್ರಾಹ್ಮಣರಿಗೆ ಅಕ್ಕಿ ಬೇಳೆಗಳನ್ನು ಯಥಾಶಕ್ತಿ ದಾನ ಮಾಡುವದು. ಬಳಿಕ ದೇವರ ಹಾಡುಗಳನ್ನು ಹೇಳಿ ದೇವರಿಗೆ ನಮಸ್ಕಾರ ಸಲ್ಲಿಸಿ ಬಾಂಧವರೊಂದಿಗೆ ಊಟ ಮಾಡಬೇಕು.**

ಇವೆಲ್ಲವನ್ನೂ ಭಕ್ತಿ ಶ್ರದ್ಧೆಗಳಿಂದ ಮಾಡಿದರೆ ಸಾಕು. **ರಾಮ ಎಂಬ ಒಂದು ಮಂತ್ರ ಸಾಕು.** ಶೂದ್ರರಿಗೆ ಪರಿಪೂರ್ಣ ಫಲ ದೊರೆಯುತ್ತದೆ.

ಭೂಮಿಯನ್ನು ಬಿತ್ತು ಉತ್ತು ಧಾನ್ಯವನ್ನು ಬೆಳೆದು ಸಮಾಜಕ್ಕೆ ನೀಡುವದೇ ಮಹತ್ತರವಾದ ದೇವರ ಪೂಜೆ. ಭೂಮಿತಾಯಿಯ ಆ ಅನನ್ಯಪೂಜೆಯನ್ನು ಮಾಡಿದ ರೈತಾಪಿವರ್ಗದ ಜನರು ಮಂತ್ರ ತಂತ್ರಗಳನ್ನು ಕಲಿತು, ಛಳಿ ಮಳೆಯೆನ್ನದೆ ನಿಯಮ ಪಾಲಿಸಿ ದೇವರನ್ನು ಆರಾಧಿಸಬೇಕಾಗಿಲ್ಲ.

**ಕೃಷಿಯ ಕೆಲಸ ಚುರುಕುಗೊಂಡಿರುವ ಕಾರ್ಯವಿದು. ಗದ್ದೆಯನ್ನು ಕೆಸರು ಮಾಡಿ, ಧಾನ್ಯಗಳನ್ನು ಬೆಳೆಯುವದೇ ಭಗವಂತನ ಪೂಜೆ. ಸಕಲ ದೇವತೆಗಳ ಪೂಜೆ.**

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರರು ತಮ್ಮತಮ್ಮ ಧರ್ಮಗಳಿಂದಲೇ ದೇವರನ್ನು ಆರಾಧಿಸಬೇಕು. ಆಗಲೇ ದೇವರು ಹೃದಯದಲ್ಲಿ ಗೋಚರನಾಗುವದು. **“ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ”**

## ಅರ್ಥಸಹಿತ ಸಂಕಲ್ಪಗಳು

ಶ್ರೀಹರಿಯ ಪ್ರೀತಿ, ಜ್ಞಾನ, ಭಕ್ತಿ, ವೈರಾಗ್ಯ, ಮುಕ್ತಿ ಮತ್ತು ಸಾಧನೆಗೆ ಉಪಯೋಗವಾಗುವ ಪದಾರ್ಥಗಳನ್ನು ಮಾತ್ರ ಅಪೇಕ್ಷಿಸಿ ಮಾಡುವ ಸಂಕಲ್ಪ ನಿಷ್ಕಾಮ ಸಂಕಲ್ಪ.

ಸರ್ವೋತ್ತಮನಾದ ಶ್ರೀಮನ್ನಾರಾಯಣ, ತತ್ವಾಭಿಮಾನಿ ದೇವತೆಗಳು ನನ್ನಲ್ಲಿ ನಿಂತು ಕರ್ಮಾಚರಣೆ ಮಾಡಿಸಿ ನನಗೆ ಫಲವನ್ನು ಅನುಗ್ರಹಿಸುತ್ತಿದ್ದಾರೆ, ಮುಂತಾಗಿ ಅನುಸಂಧಾನಪೂರ್ವಕವಾಗಿ ಮಾಡುವ ನಿಷ್ಕಾಮ ಕರ್ಮ ಮನಸ್ಸು ಬುದ್ಧಿ ಶರೀರಗಳನ್ನು ಶುದ್ಧಗೊಳಿಸಿ ನಾವು ಅಪರೋಕ್ಷಜ್ಞಾನವನ್ನು ಪಡೆಯುವಂತೆ ಮಾಡುತ್ತವೆ. ಸಂಸಾರದ ಬವಣೆಯನ್ನೇ ಕಳೆದುಕೊಳ್ಳುವ ಮಾರ್ಗವಿದು.

ತಾಪತ್ರಯಗಳ ಹೊಡೆತದಿಂದ, ದಾರಿದ್ರ್ಯ, ಆನಾರೋಗ್ಯ, ಸಾಲ, ಕೌಟುಂಬಿಕ ಸಮಸ್ಯೆಗಳಿಂದ ಬಳಲುವಾಗ ಅದರ ನಿವಾರಣೆಗಾಗಿ  ಈ ಸತ್ಕರ್ಮವನ್ನು ಮಾಡುತ್ತೇನೆ ಎಂದು ಮಾಡುವದು ಸಕಾಮ ಸಂಕಲ್ಪ.

ದೇವರ ಅನುಗ್ರಹದಿಂದ ಕಷ್ಟಗಳು ದೂರವಾಗುತ್ತವೆ, ನೋವಿಗೆ ಕಾರಣವಾದ ಪಾಪಗಳು ಪರಿಹಾರವಾಗುತ್ತವೆ.

ಸಕಾಮವಾಗಿ ಮಾಡುವ ಅನಿವಾರ್ಯತೆಯಿದ್ದಲ್ಲಿ, ದಾನ, ಜಪ, ನಮಸ್ಕಾರ, ಸಂಕೀರ್ತನೆ, ಪೂಜೆ, ಸ್ನಾನಗಳಲ್ಲಿ ಒಂದನ್ನಾದರೂ, ಮುಖ್ಯವಾಗಿ ಸಂಕೀರ್ತನೆ ನಮಸ್ಕಾರಗಳನ್ನು ನಿಷ್ಕಾಮವಾಗಿ ಮಾಡಿ ಉಳಿದದ್ದನ್ನು ಸಕಾಮವನ್ನಾಗಿ ಮಾಡಬೇಕು.

ಸಕಾಕರ್ಕ್ಮ ಸಂಸಾರದಲ್ಲಿ ತಾಪತ್ರಯವನ್ನು ಕಳೆಯುತ್ತದೆ. ನಿಷ್ಕಾಮ ಕರ್ಮ ಸಂಸಾರವನ್ನೇ ಕಳೆದು ಶ್ರೀಹರಿಯ ಲೋಕವನ್ನು ಪಡೆಯಲು ಮಾರ್ಗವಾಗುತ್ತದೆ.

ಎರಡೂ ಸಂಕಲ್ಪಗಳನ್ನು ಅರ್ಥಸಮೇತ ವಿವರಿಸುತ್ತೇನೆ.

## ನಿಷ್ಕಾಮ ಸಂಕಲ್ಪ

ಆಚಮನವನ್ನು ಮಾಡಿ,

ಪ್ರಾಣಾಯಾಮವನ್ನು ಮಾಡಿ

ದೇಶ-ಕಾಲಗಳ ಸಂಕಲ್ಪವನ್ನು ಮಾಡಿ

**ಅದ್ಯ ಪೂರ್ವೋಚ್ಚರಿತ ಏವಂಗುಣ ವಿಶೇಷಣ ವಿಶಿಷ್ಟಾಯಾಂ**

ಹಿಂದೆ ಹೇಳಲ್ಪಟ್ಟ ಎಲ್ಲ ಗುಣಗಳಿಂದ ಕೂಡಿದ

**ಅಸ್ಮದ್ಗುರ್ವಂತರ್ಗತ (ಸ್ತ್ರೀಯರು ಪತ್ಯಂತರ್ಗತ ಎಂದು ಹೇಳಬೇಕು)**

ನನ್ನ ಗುರುಗಳ (ಗಂಡನ) ಅಂತರ್ಯಾಮಿಯಾದ

**ಪರಮಗುರ್ವಂತರ್ಗತ**

ನನ್ನ ಪರಮಗುರುಗಳ (ಗುರುಗಳ ಗುರುಗಳು ಪರಮಗುರುಗಳು) ಅಂತರ್ಯಾಮಿಯಾದ

**ಸಮಸ್ತಪರಂಪರಾಗುರ್ವಂತರ್ಗತ**

ಇಡಿಯ ಪರಂಪರೆಯಲ್ಲಿ ಬಂದಿರುವ ಎಲ್ಲ ಗುರುಗಳ ಅಂತರ್ಯಾಮಿಯಾದ

## ಸಮಸ್ತ ತತ್ವಾಭಿಮಾನಿದೇವತಾಂತರ್ಗತ

ಸಕಲ ತತ್ವಾಭಿಮಾನಿ ದೇವತೆಗಳ ಅಂತರ್ಯಾಮಿಯಾದ

## ಸಂಜ್ಞಾಪತಿ ಸೂರ್ಯಾಂತರ್ಗತ

ಸಂಜ್ಞಾಪತಿ, ಚಕ್ಷುರಿಂದ್ರಿಯ ನಿಯಾಕರ್ಕಾದ ಸೂರ್ಯದೇವರ ಅಂತರ್ಯಾಮಿಯಾದ

## ಪಾರ್ವತೀಪತಿರುದ್ರಾಂತರ್ಗತ

ಉಮಾಪತಿ ಮನೋನಿಯಾಮಕ ರುದ್ರದೇವರ ಅಂತರ್ಯಾಮಿಯಾದ

## ಭಾರತೀರಮಣಮುಖ್ಯಪ್ರಾಣಾಂತರ್ಗತ

ಭಾರತಿಯ ಅರಸ ಮುಖ್ಯಪ್ರಾಣನ ಅಂತರ್ಯಾಮಿಯಾದ

## ಶ್ರೀವಿಷ್ಣುಪ್ರೇರಣಯಾ

ಶ್ರೀಮನ್ನಾರಾಯಣನ ಪ್ರೇರಣೆಯಂತೆ

## ಶ್ರೀ ವಿಷ್ಣುಪ್ರೀತ್ಯರ್ಥಂ

ಶ್ರೀಮನ್ನಾರಾಯಣನ ಪ್ರೀತ್ಯರ್ಥವಾಗಿ

## ಮಮ ಸರ್ವಪಾಪಕ್ಷಯಾರ್ಥಂ

ನನ್ನ ಎಲ್ಲ ಪಾಪಗಳು ನಾಶವಾಗುದವದಕ್ಕಾಗಿ

## ವಿಷ್ಣುಭಕ್ತಿ ತತ್ವಜ್ಞಾನ ವೈರಾಗ್ಯಾದಿ ಮಹಾಸದ್ಗುಣ-ಅಭಿವೃದ್ಧ್ಯರ್ಥಂ

ಹರಿಯ ಪಾದದಲ್ಲಿ ಭಕ್ತಿ, ಶಾಸ್ತ್ರಗಳ ಪರಿಶುದ್ಧ ಜ್ಞಾನ, ಸಾಂಸಾರಿಕಪದಾರ್ಥಗಳಲ್ಲಿ ವೈರಾಗ್ಯ ಮುಂತಾದ ಮಹತ್ತರ ಸದ್ಗುಣಗಳು ನನ್ನಲ್ಲಿ ಅಭಿವೃದ್ಧವಾಗಲಿ ಎಂಬ ಕಾರಣಕ್ಕಾಗಿ

## ಜನ್ಮನಿ ಜನ್ಮನಿ ವೈಷ್ಣವತ್ವಪ್ರಾಪ್ತ್ಯರ್ಥಂ

ಮುಂದಿನ ಎಲ್ಲ ಜನ್ಮಗಳಲ್ಲಿಯೂ ವೈಷ್ಣವಜನ್ಮ ದೊರಯಲಿ ಎಂಬ ಕಾರಣಕ್ಕಾಗಿ

## ಅಸ್ಮದ್ಗುರೂಣಾಂ ಚರಣನಲಿನಸೇವಾಸೌಭಾಗ್ಯಪ್ರಾಪ್ತ್ಯರ್ಥಂ

ನನಗೆ ಅಪರೋಕ್ಷಜ್ಞಾನವನ್ನು ಕರುಣಿಸುವ ಗುರುಗಳ (ಪತಿಯ) ಪಾದಕಮಲಗಳ ಸೇವೆಯನ್ನು ಮಾಡುವ ಸೌಭಾಗ್ಯದ ಪ್ರಾಪ್ತಿಗಾಗಿ

## ತನ್ಮುಖಾತ್ ಸಕಲ ಸಚ್ಛಾಸ್ತ್ರಶ್ರವಣಯೋಗ್ಯತಾಪ್ರಾಪ್ತ್ಯರ್ಥಂ

ಆ ಗುರುಗಳ (ಪತಿಯ) ಮುಖದಿಂದ ಸಕಲ ಸಚ್ಛಾಸ್ತ್ರಗಳನ್ನು ಶ್ರವಣ ಮಾಡುವ ಯೋಗ್ಯತೆ ಪ್ರಾಪ್ತಿಯಾಗಲೆಂದು

**ತದರ್ಥಂ. ಅಶೇಷ-ಮನೋದೋಷ-ದೇಹದೋಷ-ವಿನಾಶಾರ್ಥಂ**

ಅದಕ್ಕಾಗಿ ಎಲ್ಲ ರೀತಿಯ ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯ ಮುಂತಾದ ಮನೋದೋಷಗಳ, ದೇಹದ ಅವಲಕ್ಷಣಗಳ ನಾಶಕ್ಕಾಗಿ

**ಸೂರ್ಯಸಂಕ್ರಮಣಸ್ಯ ಪರ್ವಕಾಲೇ**

ಸಂಕ್ರಮಣದ ಪವಿತ್ರವಾದ ಪರ್ವಕಾಲದಲ್ಲಿ

ನೀವು ಯಾವ ಕರ್ಮವನ್ನು ಮಾಡುತ್ತೀರಿಯೋ ಆ ಕರ್ಮವನ್ನು ಹೇಳಬೇಕು.

**ರಾಘವೇಂದ್ರಸ್ತೋತ್ರಪಾರಾಯಣಂ ಕರಿಷ್ಯೇ**
**ವಾಯುಸ್ತುತಿಪಾರಾಯಣಂ ಕರಿಷ್ಯೇ**
**ವಿಷ್ಣುಸಹಸ್ರನಾಮಪಾರಾಯಣಂ ಕರಿಷ್ಯೇ**

ರಾಯರಸ್ತೋತ್ರ-ವಾಯುಸ್ತುತಿ-ವಿಷ್ಣುಸಹಸ್ರನಾಮಗಳನ್ನು ಪಠಿಸುತ್ತೇನೆ.

**ಗಾಯತ್ರೀಜಪಂ ಕರಿಷ್ಯೇ**
**ನಾರಾಯಣಮಂತ್ರಜಪಮಹಂ ಕರಿಷ್ಯೇ**
**ನವಗ್ರಹಮಂತ್ರಜಪಂ ಕರಿಷ್ಯೇ**

ಗಾಯತ್ರೀಮಂತ್ರ, ನವಗ್ರಹಮಂತ್ರಗಳನ್ನು ಜಪಿಸುತ್ತೇನೆ. ಯಾವುದೇ ಮಂತ್ರ ಜಪ ಮಾಡುವವರು ಅದರ ಅಂಗನ್ಯಾಸ, ಕರನ್ಯಾಸಗಳ ಜೊತೆಯಲ್ಲಿಯೇ ಮಾಡಬೇಕು.

**ಸರ್ವಪಿತೃತರ್ಪಣಂ ಆಚರಿಷ್ಯೇ**
ಸಮಸ್ತ ಪಿತೃಗಳಿಗೂ ತಿಲತರ್ಪಣವನ್ನು ನೀಡುತ್ತೇನೆ.

**ಯಥಾಶಕ್ತಿ ದಾನಂ ಕರಿಷ್ಯೇ**
ನನಗೆ ಶಕ್ತಿಯಿದ್ದಷ್ಟು ದಾನವನ್ನು ಮಾಡುತ್ತೇನೆ

**ಯಥಾಶಕ್ತಿ ನಮಸ್ಕಾರಾನ್ ಕರೋಮಿ**
ದೇಹಕ್ಕೆ ಶಕ್ತಿಯಿದ್ದಷ್ಟು ನಮಸ್ಕಾರಗಳನ್ನು ಮಾಡುತ್ತೇನೆ.

ಎಂದು ಸಂಕಲ್ಪಿಸಿ ಶ್ರೀಹರಿಯ ಕಾರುಣ್ಯ ಮುಂತಾದ ಕಲ್ಯಾಣಗುಣಗಳ ಚಿಂತನೆ ಮಾಡಬೇಕು ಮುಖ್ಯವಾಗಿ ಅಂತರ್ಯಾಮಿ, ಮುಖ್ಯಪ್ರಾಣದೇವರು, ದೇವತೆಗಳು ಮತ್ತು ಶ್ರೀಮದಾಚಾರ್ಯರ ಪರಿಶುದ್ಧ ಪರಂಪರೆಗಳಲ್ಲಿ ಬಂದ ಮಹಾನುಭಾವರನ್ನು ಸ್ಮರಿಸಬೇಕು. ಆ ನಂತರ

**ನಾಹಂ ಕರ್ತಾ ಹರಿಃ ಕರ್ತಾ**
**ತತ್ಪೂಜಾ ಕರ್ಮ ಚಾಖಿಲಮ್**
**ತಥಾಪಿ ಮತ್ಕೃತಾ ಪೂಜಾ**
**ತತ್ಪ್ರಸಾದೇನ ನಾನ್ಯಥಾ**

**ತದ್-ಭಕ್ತಿಃ, ತತ್ಫಲಂ ಮಹ್ಯಂ**
**ತತ್-ಪ್ರಸಾದಃ ಪುನಃಪುನಃ**
**ಕರ್ಮನ್ಯಾಸೋ ಹರಾವೇವಂ**
**ವಿಷ್ಣೋಸ್ತೃಪ್ತಿಕರಃ ಸದಾ**

"ನಾನು ಸ್ವತಂತ್ರ ಕರ್ತೃವಲ್ಲ, ಹರಿಯ ಅನುಗ್ರಹದಿಂದ ಕರ್ತೃವಾದವನು, ಎಲ್ಲ ಸತ್ಕರ್ಮಗಳೂ ಅವನ ಪೂಜೆ, ಅವನ ಪಾದದ ಭಕ್ತಿಯೇ ಆ ಪೂಜೆಯ ಫಲ, ಈ ರೀತಿಯ ಕರ್ತೃತ್ವವನ್ನು ಅದರ ಫಲವನ್ನೂ ದೇವರು ನಿರಂತರ ಅನುಗ್ರಹಿಸುತ್ತಿರಲಿ"
ಎಂದು ಚಿಂತಿಸಿ ಭಗವಂತನಲ್ಲಿ ಸಕಲ ಸತ್ಕರ್ಮಗಳನ್ನು ಸಮರ್ಪಿಸುವದು ಶ್ರೀಹರಿಗೆ ಅತ್ಯಂತ ಪ್ರಿಯಕರವಾದ ಕರ್ಮಸಮರ್ಪಣೆ.

## ಸಕಾಮ ಸಂಕಲ್ಪ

ಆರೋಗ್ಯದ ಸಮಸ್ಯೆ, ಹಣದ ಸಮಸ್ಯೆ, ಕೌಟುಂಬಿಕ ಸಮಸ್ಯೆ, ಶತ್ರುಗಳ ಸಮಸ್ಯೆ ಹೀಗೆ ಅನೇಕ ತೊಂದರೆಗಳಿಗೆ ಈಡಾಗಿರುವವರು ಅದರ ಪರಿಹಾರಕ್ಕಾಗಿಯೂ ಮಂತ್ರಸ್ತೋತ್ರಗಳ ಜಪವನ್ನು ಮಾಡಬಹುದು.

ಆಚಮನವನ್ನು ಮಾಡಿ,
ಪ್ರಾಣಾಯಾಮವನ್ನು ಮಾಡಿ
ದೇಶ-ಕಾಲಗಳ ಸಂಕಲ್ಪವನ್ನು ಮಾಡಿ

**ಅದ್ಯ ಪೂರ್ವೋಚ್ಚರಿತ ಏವಂಗುಣ ವಿಶೇಷಣ ವಿಶಿಷ್ಟಾಯಾಂ**
ಹಿಂದೆ ಹೇಳಲ್ಪಟ್ಟ ಎಲ್ಲ ಗುಣಗಳಿಂದ ಕೂಡಿದ

**ಅಸ್ಮದ್ಗುರ್ವಂತರ್ಗತ (ಸ್ತ್ರೀಯರು ಪತ್ಯಂತರ್ಗತ ಎಂದು ಹೇಳಬೇಕು)**
ನನ್ನ ಗುರುಗಳ (ಗಂಡನ) ಅಂತರ್ಯಾಮಿಯಾದ

**ಪರಮಗುರ್ವಂತರ್ಗತ**
ನನ್ನ ಪರಮಗುರುಗಳ (ಗುರುಗಳ ಗುರುಗಳು ಪರಮಗುರುಗಳು) ಅಂತರ್ಯಾಮಿಯಾದ

**ಸಮಸ್ತಪರಂಪರಾಗುರ್ವಂತರ್ಗತ**
ಇಡಿಯ ಪರಂಪರೆಯಲ್ಲಿ ಬಂದಿರುವ ಎಲ್ಲ ಗುರುಗಳ ಅಂತರ್ಯಾಮಿಯಾದ

**ಸಮಸ್ತ ತತ್ವಾಭಿಮಾನಿದೇವತಾಂತರ್ಗತ**
ಸಕಲ ತತ್ವಾಭಿಮಾನಿ ದೇವತೆಗಳ ಅಂತರ್ಯಾಮಿಯಾದ

**ಸಂಜ್ಞಾಪತಿ ಸೂರ್ಯಾಂತರ್ಗತ**
ಸಂಜ್ಞಾಪತಿ, ಚಕ್ಷುರಿಂದ್ರಿಯ ನಿಯಾಕರ್ಕಾದ ಸೂರ್ಯದೇವರ ಅಂತರ್ಯಾಮಿಯಾದ

**ಪಾರ್ವತೀಪತಿರುದ್ರಾಂತರ್ಗತ**
ಉಮಾಪತಿ ಮನೋನಿಯಾಮಕ ರುದ್ರದೇವರ ಅಂತರ್ಯಾಮಿಯಾದ

**ಭಾರತೀರಮಣಮುಖ್ಯಪ್ರಾಣಾಂತರ್ಗತ**
ಭಾರತಿಯ ಅರಸ ಮುಖ್ಯಪ್ರಾಣನ ಅಂತರ್ಯಾಮಿಯಾದ

## ಶ್ರೀವಿಷ್ಣುಪ್ರೇರಣಯಾ
ಶ್ರೀಮನ್ನಾರಾಯಣನ ಪ್ರೇರಣೆಯಂತೆ

## ಶ್ರೀ ವಿಷ್ಣುಪ್ರೀತ್ಯರ್ಥಂ[1]
ಶ್ರೀಮನ್ನಾರಾಯಣನ ಪ್ರೀತ್ಯರ್ಥವಾಗಿ

## ಮಮ (ಅಸ್ಮಾಕಂ) ಜಾತಕೇ ಗೋಚಾರೇ ಚ ದುಷ್ಟಸ್ಥಾನಸ್ಥಿತ-ಗ್ರಹಬಾಧಾನಿವಾರಾಣಾರ್ಥಂ
ನನ್ನ (ನಮ್ಮೆಲ್ಲರ) ಜಾತಕದಲ್ಲಿ ಮತ್ತು ಗೋಚಾರದಲ್ಲಿ ದುಷ್ಟಸ್ಥಾನದಲ್ಲಿರುವ ಗ್ರಹಗಳಿಂದ ಸೂಚಿತವಾಗುವ ದೋಷಗಳ ನಿವಾರಣೆಗಾಗಿ

## ಶತ್ರುಬಾಧಾನಿವಾರಣಾರ್ಥಂ
ನಮಗೆ ಉಂಟಾಗಿರುವ ಶತ್ರುಬಾಧೆಯ ನಿವಾರಣೆಗಾಗಿ

## ಋಣಮುಕ್ತ್ಯರ್ಥಂ
ಎಲ್ಲ ಸಾಲಗಳು ತೀರುವದಕ್ಕಾಗಿ

---

[1] ನಮ್ಮ ಯಾವುದೇ ಅಪೇಕ್ಷೆಗಳೂ ಪೂರ್ಣವಾಗಬೇಕಾದರೂ ದೇವರು ಪ್ರೀತನಾಗಲೇ ಬೇಕು. ಹೀಗಾಗಿ ಸಕಾಮ ಸಂಕಲ್ಪದಲ್ಲಿಯೂ ವಿಷ್ಣುಪ್ರೀತ್ಯರ್ಥಂ ಎಂದು ಹೇಳಲೇಬೇಕು.

**ಧನ-ಧಾನ್ಯ-ವಾಹನ-ಪಶ್ವಾದಿ-ಸಂಪತ್-ಪ್ರಾಪ್ತ್ಯರ್ಥಂ**
ಹಣ-ಧಾನ್ಯ-ವಾಹನ-ಗೋವುಗಳೇ ಮುಂತಾದ ಸಂಪತ್ತಿನ ಪ್ರಾಪ್ತಿಗಾಗಿ

**ವಿವಾಹಪ್ರತಿಬಂಧಕದೋಷನಿವಾರಣಾರ್ಥಂ**
ವಿವಾಹಕ್ಕೆ ಉಂಟಾಗುತ್ತಿರುವ ದೋಷದ ನಿವಾರಣೆಗಾಗಿ

**ಅವಿಚ್ಛಿನ್ನ-ಸುಖಯುಕ್ತ-ದಾಂಪತ್ಯಪ್ರಾಪ್ತ್ಯರ್ಥಂ**
ನಿರಂತರವಾದ, ಸುಖಮಯವಾದ ದಾಂಪತ್ಯದ ಪ್ರಾಪ್ತಿಗಾಗಿ

**ಕುಟುಂಬ-ಕಲಹ-ವಿನಾಶಾರ್ಥಂ**
ಕುಟುಂಬದಲ್ಲಿರುವ ಕಲಹಗಳ ನಿವಾರಣೆಗಾಗಿ

**ಸತ್ಸಂತಾನಪ್ರಾಪ್ತ್ಯರ್ಥಂ**
ಉತ್ತಮಸಂತಾನದ ಪ್ರಾಪ್ತಿಗಾಗಿ

**ಅಪತ್ಯಾನಾಂ ಸರ್ವವಿಧಶ್ರೇಯಃಪ್ರಾಪ್ತ್ಯರ್ಥಂ**
ನಮ್ಮ ಮಕ್ಕಳಿಗೆ ಎಲ್ಲ ವಿಧ ಶ್ರೇಯಸ್ಸಿನ ಪ್ರಾಪ್ತಿಗಾಗಿ

**ದೀರ್ಘಾಯುಷ್ಯಸಿದ್ಧ್ಯರ್ಥಂ**
ದೀರ್ಘವಾದ ಆಯುಷ್ಯದ ಪ್ರಾಪ್ತಿಗಾಗಿ

**ಅದೈನ್ಯೇನ ಜೀವನ ಪ್ರಾಪ್ತ್ಯರ್ಥಂ**
ಯಾವುದೇ ರೀತಿಯ ದೈನ್ಯತೆಯಿಲ್ಲದ ಜೀವನಕ್ಕಾಗಿ

**ದೀರ್ಘಜೀವನಾಂತೇ ಸುಖೇನ ಮರಣ ಪ್ರಾಪ್ತ್ಯರ್ಥಂ**
ಸುದೀರ್ಘಜೀವನದ ಕಡೆಯಲ್ಲಿ ಯಾವುದೇ ನರಳಿಕೆಯಿಲ್ಲದ ಮರಣ ಲಭಿಸುವದಕ್ಕಾಗಿ

**ಸೂರ್ಯಸಂಕ್ರಮಣಸ್ಯ ಪರ್ವಕಾಲೇ**
ಸಂಕ್ರಮಣದ ಪವಿತ್ರವಾದ ಪರ್ವಕಾಲದಲ್ಲಿ

ನೀವು ಯಾವ ಕರ್ಮವನ್ನು ಮಾಡುತ್ತೀರಿಯೋ ಆ ಕರ್ಮವನ್ನು ಹೇಳಬೇಕು.

**ರಾಘವೇಂದ್ರಸ್ತೋತ್ರಪಾರಾಯಣಂ ಕರಿಷ್ಯೇ**
**ವಾಯುಸ್ತುತಿಪಾರಾಯಣಂ ಕರಿಷ್ಯೇ**
**ವಿಷ್ಣುಸಹಸ್ರನಾಮಪಾರಾಯಣಂ ಕರಿಷ್ಯೇ**

ರಾಯರಸ್ತೋತ್ರ-ವಾಯುಸ್ತುತಿ-ವಿಷ್ಣುಸಹಸ್ರನಾಮಗಳನ್ನು ಪಠಿಸುತ್ತೇನೆ.

**ಗಾಯತ್ರೀಜಪಂ ಕರಿಷ್ಯೇ**
**ನಾರಾಯಣಮಂತ್ರಜಪಮಹಂ ಕರಿಷ್ಯೇ**
**ನವಗ್ರಹಮಂತ್ರಜಪಂ ಕರಿಷ್ಯೇ**
ಗಾಯತ್ರೀಮಂತ್ರ, ನವಗ್ರಹಮಂತ್ರಗಳನ್ನು ಜಪಿಸುತ್ತೇನೆ.

ಯಾವುದೇ ಮಂತ್ರ ಜಪ ಮಾಡುವವರು ಅದರ ಅಂಗನ್ಯಾಸ, ಕರನ್ಯಾಸಗಳ ಜೊತೆಯಲ್ಲಿಯೇ ಮಾಡಬೇಕು.

**ಯಥಾಶಕ್ತಿ ನಮಸ್ಕಾರಾನ್ ಕರೋಮಿ**
ದೇಹಕ್ಕೆ ಶಕ್ತಿಯಿದ್ದಷ್ಟು ನಮಸ್ಕಾರಗಳನ್ನು ಮಾಡುತ್ತೇನೆ

ಎಂದು ಸಂಕಲ್ಪಿಸಿ ಶ್ರೀಹರಿಯ ಕಾರುಣ್ಯ ಮುಂತಾದ ಕಲ್ಯಾಣಗುಣಗಳ ಚಿಂತನೆ ಮಾಡಬೇಕು ಮುಖ್ಯವಾಗಿ ಅಂತರ್ಯಾಮಿ, ಮುಖ್ಯಪ್ರಾಣದೇವರು, ದೇವತೆಗಳು ಮತ್ತು ಶ್ರೀಮದಾಚಾರ್ಯರ ಪರಿಶುದ್ಧ ಪರಂಪರೆಗಳಲ್ಲಿ ಬಂದ ಮಹಾನುಭಾವರನ್ನು ಸ್ಮರಿಸಬೇಕು. ಆ ನಂತರ

**ನಾಹಂ ಕರ್ತಾ ಹರಿಃ ಕರ್ತಾ**
**ತತ್ಪೂಜಾ ಕರ್ಮ ಚಾಖಿಲಮ್**
**ತಥಾಪಿ ಮತ್ಕೃತಾ ಪೂಜಾ**
**ತತ್ಪ್ರಸಾದೇನ ನಾನ್ಯಥಾ**

**ತದ್-ಭಕ್ತಿಃ, ತತ್ಫಲಂ ಮಹ್ಯಂ**
**ತತ್-ಪ್ರಸಾದಃ ಪುನಃಪುನಃ**
**ಕರ್ಮನ್ಯಾಸೋ ಹರಾವೇವಂ**
**ವಿಷ್ಣೋಸ್ತೃಪ್ತಿಕರಃ ಸದಾ**

"ನಾನು ಸ್ವತಂತ್ರ ಕರ್ತೃವಲ್ಲ, ಹರಿಯ ಅನುಗ್ರಹದಿಂದ ಕರ್ತೃವಾದವನು, ಎಲ್ಲ ಸತ್ಕರ್ಮಗಳೂ ಅವನ ಪೂಜೆ, ಅವನ ಪಾದದ ಭಕ್ತಿಯೇ ಆ ಪೂಜೆಯ ಫಲ, ಈ ರೀತಿಯ ಕರ್ತೃತ್ವವನ್ನು ಅದರ ಫಲವನ್ನೂ ದೇವರು ನಿರಂತರ ಅನುಗ್ರಹಿಸುತ್ತಿರಲಿ"
ಎಂದು ಚಿಂತಿಸಿ ಭಗವಂತನಲ್ಲಿ ಸಕಲ ಸತ್ಕರ್ಮಗಳನ್ನು ಸಮರ್ಪಿಸುವದು ಶ್ರೀಹರಿಗೆ ಅತ್ಯಂತ ಪ್ರಿಯಕರವಾದ ಕರ್ಮಸಮರ್ಪಣೆ.

## ಸಮರ್ಪಣೆ

**ಅಸ್ಮಿನ್ ಸೂರ್ಯಸಂಕ್ರಮಣಪರ್ವಕಾಲೇ**

ಈ ಸೂರ್ಯ ಸಂಕ್ರಮಣದ ಪವಿತ್ರ ಪರ್ವಕಾಲದಲ್ಲಿ

**ಮಯಾ ಕೃತೇನ**

ನನ್ನಿಂದ ಮಾಡಲ್ಪಟ್ಟ

**ಪಾರಾಯಣ-ಜಪ-ತರ್ಪಣ-ದಾನ-ನಮಸ್ಕಾರಾದಿ-ಸತ್ಕರ್ಮಭಿಃ**

ಸ್ತೋತ್ರಗಳ ಪಾರಾಯಣ
ಮಂತ್ರಗಳ ಜಪ
ಪಿತೃಗಳಿಗೆ ತರ್ಪಣ
ದೇವರಿಗೆ ನಮಸ್ಕಾರ
ಯಥಾಶಕ್ತಿ ದಾನ
ಮುಂತಾದ ಸತ್ಕರ್ಮಗಳಿಂದ

**ಅಸ್ಮದ್ಗುರ್ವಂತರ್ಗತ (ಮಮ ಪತ್ಯಂತರ್ಗತ)**

ನನ್ನ ಗುರುಗಳ (ಪತಿಯ) ಅಂತರ್ಯಾಮಿಯಾದ

**ಪರಮಗುರ್ವಂತರ್ಗತ**
**ಸಮಸ್ತಪರಂಪರಾಗುರ್ವಂತರ್ಗತ**
**ಸಮಸ್ತದೇವತಾಂತರ್ಗತ**
**ಭಾರತೀರಮಣಮುಖ್ಯಪ್ರಾಣಾಂತರ್ಗತ**
**ಶ್ರೀಲಕ್ಷ್ಮೀನೃಸಿಂಹಃ ಪ್ರೀಯತಾಮ್**
**ಪ್ರೀತೋ ವರದೋ ಭವತು**

**ಶ್ರೀಕೃಷ್ಣಾರ್ಪಣಮಸ್ತು**

ಪರಮಗುರುಗಳ, ಸಕಲ ಪರಂಪರಾಗುರುಗಳ, ಎಲ್ಲ ದೇವತೆಗಳ, ಭಾರತೀಪತಿಮುಖ್ಯಪ್ರಾಣದೇವರ ಅಂತರ್ಯಾಮಿಯಾದ ಶ್ರೀ ಲಕ್ಷ್ಮೀನರಸಿಂಹ ದೇವರು ಪ್ರೀತರಾಗಲಿ. ಪ್ರಸನ್ನರಾಗಿ ವರಪ್ರದರಾಗಲಿ.

ಎಲ್ಲವೂ ಮಧ್ವೇಶ ಕೃಷ್ಣನಿಗೆ ಅರ್ಪಿತವಾಗಲಿ.

**ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾನುಸೃತಃ ಸ್ವಭಾವಮ್ ಕರೋಮಿ ಯದ್ಯತ್ ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ**

ದೇಹದಿಂದ, ಮಾತಿನಿಂದ, ಮನಸ್ಸಿನಿಂದ, ಇತರ ಇಂದ್ರಿಯಗಳಿಂದ, ಬುದ್ಧಿಯಿಂದ, ಜೀವಚೈತನ್ಯದಿಂದ, ಸ್ವಭಾವಾದಿಗಳನ್ನು ಅನುಸರಿಸಿ ಏನೆಲ್ಲ ಕರ್ಮಗಳನ್ನು ಮಾಡುತ್ತೇನೆಯೋ ಅವೆಲ್ಲವನ್ನೂ ನಾರಾಯಣಾ ಇದು ನೀನು ಮಾಡಿಸಿದ ಕರ್ಮ ಎಂದು ಆ ಸರ್ವೋತ್ತಮನಿಗೆ ಸಮರ್ಪಿಸುತ್ತೇನೆ.

**ನಮೋಸ್ತ್ವನಂತಾಯ ಸಹಸ್ರಮೂರ್ತಯೇ ಸಹಸ್ರಪಾದಾಕ್ಷಿಶಿರೋರುಬಾಹವೇ ಸಹಸ್ರನಾಮ್ನೇ ಪುರುಷಾಯ ಶಾಶ್ವತೇ ಸಹಸ್ರಕೋಟೀಯುಗಧಾರಿಣೇ ನಮಃ**

ಅನಂತಗುಣಪೂರ್ಣನಿಗೆ ನಮಸ್ಕಾರ. ಅನಂತರೂಪದ ದೇವನಿಗೆ ನಮಸ್ಕಾರ.

ಅನಂತ ಕಾಲು-ಕಣ್ಣು-ತಲೆ-ತೊಡೆ-ಕೈಗಳುಳ್ಳ ದೇವನಿಗೆ ನಮಸ್ಕಾರ.

ಅನಂತ ಹೆಸರುಳ್ಳವನಿಗೆ ನಮಸ್ಕಾರ.

ಅನಾದಿ ಕಾಲದಿಂದ ಅನಂತಕಾಲದವರೆಗೆ ಇರುವ ಶಾಶ್ವತಪುರುಷನಿಗೆ ನಮಸ್ಕಾರ.

ಅನಂತಕಾಲವನ್ನು ಹೊತ್ತ ಕಾಲನಾಮಕನಿಗೆ ನಮಸ್ಕಾರ.

ಹೀಗೆ ಸಕಲ ಬ್ರಹ್ಮಾಂಡದೊಳಗೆ ವ್ಯಾಪಿಸಿ ನಿಂತ ವಿರಾಡ್ರೂಪವನ್ನು ಚಿಂತಿಸಿ ನಮಸ್ಕರಿಸಬೇಕು.

ಯಾವುದೇ ಕರ್ಮವನ್ನು ಆಚರಿಸಬೇಕಾದರೂ ಶ್ರೀಹರಿಯ ಗುಣಮಾಹಾತ್ಮ್ಯಗಳ ಚಿಂತನೆಯೊಂದಿಗೆ ಮಾಡಿದಾಗ ಒಳಗಿನ ಜೀವಚೈತನ್ಯ ಪುಳಕಿತಗೊಳ್ಳುತ್ತದೆ. ಮಾಡಿದ ಕರ್ಮಗಳು ಫಲಪ್ರದವಾಗುತ್ತವೆ.

ಈ ರೀತಿಯಾದ ಕರ್ಮಾಚರಣೆಯ ಸೌಭಾಗ್ಯ ನಿಮಗೆಲ್ಲರಿಗೆ ಒದಗಿಬರಲಿ, ಧರ್ಮದಲ್ಲಿ ವಿಶ್ವಾಸವಿಟ್ಟ ಎಲ್ಲ ಸಜ್ಜನರ ಆಪತ್ತುಗಳು ದೂರವಾಗಲಿ, ಸಕಲ ಪಿತೃಗಳು, ಸೂರ್ಯ ಚಂದ್ರಾದಿ ನವಗ್ರಹಗಳು, ಇಂದ್ರಾದಿ ದಿಕ್ಪಾಲಕರು, ರುದ್ರದೇವರು, ವಾಯುದೇವರು, ಶ್ರೀಮನ್ನಾರಾಯಣ ಪ್ರೀತನಾಗಲಿ,

ಉತ್ತಮವಾದ ಆರೋಗ್ಯ, ಸಾತ್ವಿಕವಾದ ಸಂಪತ್ತು, ಪರಿಶುದ್ಧ ತತ್ವಜ್ಞಾನ, ಪ್ರಾಮಾಣಿಕವಾದ ವೈರಾಗ್ಯ, ನಿರ್ಮಲವಾದ ಹರಿಭಕ್ತಿಯನ್ನು ನಿಮಗೆಲ್ಲರಿಗೆ ನೀಡಿ ಸದಾ ಭಾಗವತಾದಿ ಶಾಸ್ತ್ರಗಳಲ್ಲಿ ಆಸಕ್ತರನ್ನಾಗಿ ಮಾಡಲಿ

ಎಂಬ ಹಾರೈಕೆಯೊಂದಿಗೆ ವಿಶ್ವನಂದಿನಿಯ ಎಲ್ಲ ಬಾಂಧವರಿಗೂ ಕರ್ಕಸಂಕ್ರಮಣ ಶುಭವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

**ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.**

**ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.**

ಈ ಜ್ಞಾನಕಾಯ ಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವಗಾ ಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to **9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491